ಪಬ್ಲಿಕ್‌ವರ್ಕ್ಸ್.

ಇಸ್ತಿಹಾರ್‌ನಾಮೂ.

ತಾರೀಖು 25ನೇ ಆಗಸ್ಟ್ 1896.

ನಂ. 770.—4455, ಕೋಲಾರ ಡಿವಿಜನಿಗೆ ಕೇರಿದ ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಟರ್ ಸಿ. ಎಂ. ಆನಂದ ತೀರ್ಥರಾಯರಿಗೆ, 1896ನೇ ಜೂ ೧೩ನೇ ತಾರೀಖು ಲಾಗಾಯತು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ 3 ತಿಂಗಳೂ 18 ದಿನಗಳ ರಜಾ ಕೊಡಲ್ಪಟ್ಟಿರುತ್ತೆ.

2. ಸ್ ೧೮೯೬ನೇ ಜುಲೈ 30ನೇ ಮುಕ್ತುಮಿನ 696.—3927ನೇ ನಂಬರ ಇಸ್ತಿಹಾರ್‌ನಾಮೆಯಲ್ಲಿ ಮಂಜೂರ್‌ಮಾಡಿದ್ದ ಎರಡು ತಿಂಗಳ ಪ್ರಿವಿಲೀಜ್ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಸಿ. ಬರ್ಡ್, ಕರ್ನಲ್,
ಮೈಸೂರ್ ಗವರ್ಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರಿಟರಿ.

ಇಸ್ತಿಹಾರ್‌ನಾಮೂ.

ತಾರೀಖು 27ನೇ ಆಗಸ್ಟ್ 1896.

ನಂ. 479.—ಬೀರೂರಿಂದ ಶಿವಮೊಗ್ಗಕ್ಕೆ ಸುಮಾರು $38\frac{1}{2}$ ಮೈಲಿಗಳ ಘಾಸಲೆ ರೈಲ್ವೇ ಲೈನು ಹಾಕುವ ಬಗ್ಯಾಗಿ ದರಖಾಸ್ತುಗಳು ಇದರಿಂದ ಅಪೇಕ್ಷಿಸಲ್ಪಡುತವೆ.

2. ಮಾಡಬೇಕಾಗಿರುವ ಪ್ರತಿ ತರಹೇದ ಕಾಮುಗಾರಿಗೂ ದರಖಾಸ್ತುಗಳು "ರೇಟುಗಳ ಷೆಡ್ಯೂಲ್" ನಮೂನೆಯಲ್ಲಿ ಇರತಕ್ಕದ್ದು.

3. ಕಾಮುಗಾರಿಯು ಮೂರುಭಾಗಗಳಾಗಿಯೂ ಬೆಂಕೀಪುರದ ಹೊಸಕೇತುವೆ ಮತ್ತು ಅದರ ಕಟ್ಟೆಗಳು ಪ್ರತ್ಯೇಕ ಕಂಟ್ರಾಕ್ಟ್‌ಗಾಗಿಯೂ ಕೊಡಲ್ಪಡುವದು. ಸದರೀ ಕಾಮುಗಾರಿಯಲ್ಲಿ ಪರ್ಮನೆಂಟ್ ವೇ ವ ಫ್ಲೀಕ್ಷರ್ ಯಂತ್ರಗಳು ಹೊರತಾಗಿ ವಿಸಿಷ್ಟ ಕೆಲಸವೂ ಆಡಗಿರುವದು. ಅಪೇಕ್ಷಿಸುವ ಕಂಟ್ರಾಕ್ಟರುಗಳು ವಂದು ಭಾಗಕ್ಕೆ ಜಾಸ್ತಿಯಾಗಿ ಪ್ರತ್ಯೇಕ ದರಖಾಸ್ತು ಮಾಡುವದಕ್ಕೆ ಸ್ವತಂತ್ರರಾಗಿರುತ್ತಾರೆ.

4. ದರಖಾಸ್ತಿನ ನಮೂನೆಗಳು ಇದರಡಿ ರುಜು ಮಾಡಿರುವವರಿಗೆ ಲಿಖಿತಮೂಲಕವಾಗಿಯಾಗಲಿ ಯಾ ರೂಬರೂ ಆಗಲಿ ಕೇಳಿ ಪಡೆಯಬಹುದು.

5. ದರಖಾಸ್ತುಗಳು 1896ನೇ ಅಕ್ಟೋಬರ್ 1ನೇ ತಾರೀಖಿನ ಮಧ್ಯಾನ್ನದಲ್ಲಾಗಲಿ ಯಾ ತತ್ಪೂರ್ವದಲ್ಲಾಗಲಿ ಈ ಕೆಳಗೆ ರುಜು ಮಾಡಿರುವವರಿಗೆ ತಲ್ಪತಕ್ಕದ್ದು.

6. ಕಂಟ್ರಾಕ್ಟಿನ ವಿಶೇಷ ಸಂಗತಿಗಳು ಮತ್ತು ಷರತ್ತುಗಳು ಮೈಸೂರು ರೈಲ್ವೆಗಳ ಗವರ್ಮೆಂಟ್ ಸೆಕ್ರಿಟರಿಯವರ ಆಫಿಸಿನಲ್ಲಿ, ಆದಿತ್ಯವಾರಗಳು ಮತ್ತು ರಜಾ ದಿನಗಳು ಹೊರತಾಗಿ, 11 ಘಂಟೆಯಿಂದ 4 ಘಂಟೆ ವರಿಗಿನ ಮಧ್ಯೆ ಕಾಲಗಳಲ್ಲಿ ಪ್ರತಿದಿನವೂ ನೋಡಬಹುದು ಮತ್ತು ಸಮಾಚಾರ ಪಡೆಯಬಹುದು.

7. ಕಾಮುಗಾರಿಗಳ ವಿಶೇಷ ಸಂಗತಿಯ ಮತ್ತು ಕಂಟ್ರಾಕ್ಟಿನ ಷರತ್ತುಗಳ ಅಚ್ಚು ಹಾಕಲ್ಪಟ್ಟ ಪ್ರತಿಯು ಮೊದಲು ಹೇಳಿದ್ದಕ್ಕೆ ಹತ್ತು ರೂಪಾಯಿಗಳೂ ಮತ್ತು ತರುವಾಯ ಹೇಳಿದ್ದಕ್ಕೆ ಐದು ರೂಪಾಯಿಗಳೂ ತಲ್ಪಿದ ಮೇಲೆ ಕೊಡಲಿಸಲ್ಪಡುವದು.

8. ಈ ಕೆಳಗೆ ರುಜು ಮಾಡಿರುವವರು ಕಮ್ಮಿಯಾದ ಯಾ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಹಾಗೆ ಮಾಡುವದಕ್ಕೆ ಕಾರಣಗಳು ತಿಳಿಸದೇನೇ ಉಳಿಸಿಕೊಂಡಿರುತ್ತಾರೆ.

ಹುಕುಂ ಬಮೋಜೀಬ್,
ಸಿ. ಬರ್ಡ್, ಕರ್ನಲ್,
ಮೈಸೂರ್ ರೈಲ್ವೆಗಳ ಗವರ್ಮೆಂಟ್ ಸೆಕ್ರಿಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷ್ಯನ್.

ನಂ. 328. ತಾರೀಖು 24ನೇ ಆಗಸ್ಟ್ 1896, ಬೆಂಗಳೂರು.

ಈಸಬಾ ಸಾಗರದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಗಣಪತಿ ಸ್ವಾಮಿಯವರ ದೇವಸ್ಥಾನಕ್ಕೆ ಧರ್ಮದರ್ಶಿಯಾದ ಯಾಸ್ಕೆ ನ ರಂಗಪ್ಪನವರಿಗೆ ಬದಲಾಗಿ ಸುಬ್ಬಾಯರನ್ನ ಧರ್ಮದರ್ಶಿಯಾಗಿ ನೇಮಿಸಿ ಇದೆ.

ಏ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂಪರ್‌ಟೆಂಡೆಂಟ್ ಮತ್ತು ಸೆಕ್ರಿಟರಿ.